# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಪುಲಿಕೇಶಿನಗರ ಉಪ ವಿಭಾಗ, ವಾರ್ಡ್ ನಂ.47(ಡಿ.ಜೆ ಹಳ್ಳಿ)
## ವಾರ್ಡ್ ಸಮಿತಿ ಸಭೆ, ದಿನಾಂಕ:19-01-2021 ರ ಸಭಾ ನಡವಳಿ

ಸಂಖ್ಯೆ:ಸ.ಕಾನಿ.ಅ (ಪು.ನ)/ಪಿಆರ್/08/20-21

ದಿನಾಂಕ: 19-01-2021 ರಂದು ಬೆಳ್ಳಗೆ 11.00 ಗಂಟೆಗೆ ವಾರ್ಡ್ ನಂ. 47-ಡಿ.ಜೆ.ಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಡಿ.ಜೆ ಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರಮ ಸಂಖ್ಯೆ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1. | S. Vishwanatha | Nodal Officer ward No. 47- D J Halli & Asst. Executive Engineer, J.C Nagar Sub-division |
| 2. | Sri. Rahul | J.E, BWSSB |
| 3. | Sri.Venkatesh | Senior Health Inspector |
| 4. | Sri.Madhu | Junior Health Inspector |
| 5. | Sri.Nagaraj | Work Inspector Ward No.47 |
| 6. | Sri. ChandraShekar | Horticultur Suprevisor |
| 7. | Sri.Suresh | Ward Committee Member |
| 8. | Sri. Purushothama | Ward Committee Member |
| 9. | Sri. Ahemed Husian | Ward Committee Member |
| 10. | Sri. Munimaran | Ward Committee Member |
| 11. | Sri. Chand pasha | Ward Committee Member |
| 12. | Sri. Mohan | Ward Committee Member |
| 13. | Sri. Ansar Pasha | Ward Committee Member |
| 14. | Sri.Rajan | Mother Foundation of India |

ಶ್ರೀ, ಎಸ್.ವಿಶ್ವನಾಥ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಜೆ.ಸಿ ನಗರ ಉಪ ವಿಭಾಗ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು (ನೋಡಲ್ ಅಧಿಕಾರಿ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿ/ ನೌಕರರು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

- ದಿನಾಂಕ : 19-01-2021 ರಂದು ನಡೆದ ಸಭೆಯ ಸಭಾ ನಡವಳಿಯನ್ನು ಚರ್ಚಿಸಿ ಬಾಕಿ ಇರುವ ಕುಂದು ಕೊರತೆಗಳನ್ನು ಪೂರೈಸಲು ಸಭೆಯಲ್ಲಿ ತಿಳಿಸಿರುತ್ತಾರೆ.

1. ಸಾರ್ವಜನಿಕರು ಈ ಹಿಂದಿನ ಸಭೆಯಲ್ಲಿ ಈದ್ಗಾ ಮೊಹಲ್ಲಾ ಬಳಿ ನೀರು ಹರಿದು ಮನೆಗಳಿಗೆ ನುಗ್ಗುವುದನ್ನು ತಡೆಯಲು ಕಾಂಪೌಂಡ್ ಗೋಡೆ ಕಟ್ಟಲು ಕೋರಿರುತ್ತಾರೆ. ಅದರಂತೆ ಸದರಿ ಸ್ಥಳವನ್ನು ಪರಿಶೀಲಿಸಲಾಗಿದ್ದು ಈಗಾಗಲೇ ಪಾಲಿಕೆಯ ವತಿಯಿಂದ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಕಾಂಪೌಂಡ್ ಗೋಡೆ ಕಟ್ಟಲು ಸೂಚಿಸಲಾಗಿದ್ದು ಶೀಘ್ರದಲ್ಲಿಯೇ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲಾಗುವುದೆಂದು ಕಾಮಗಾರಿ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ.
2. ವಾರ್ಡ್ ನಂ.47 ರ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮೆರಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದ್ದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ವಾರ್ಡ್ ವ್ಯಾಪ್ತಿಯಲ್ಲಿ ಅವಶ್ಯವಿರುವ ಸ್ಥಳಗಳನ್ನು ಗುರುತಿಸಿ ಕ್ಯಾಮೆರಗಳನ್ನು ಅಳವಡಿಸಲು ಸೂಚಿಸಲಾಯಿತು.
3. ದೊಡ್ಡಣ್ಣ ನಗರದ ಅಂಬೇಡ್ಕರ್ ಪಾರ್ಕನ್ನು ಪರಿಶೀಲಿಸಲಾಗಿ ಪಾರ್ಕ್ ಒಳಗಡೆ ಅಳವಡಿಸಲಾಗಿರುವ ವಿದ್ಯುತ್ ಪರಿವರ್ತಕದ ಸುತ್ತಲು ಸಾರ್ವಜನಿಕ ಹಿತದೃಷ್ಟಿಯಿಂದ ಯಾರಿಗೂ ತೊಂದರೆಯಾಗದಂತೆ ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಲು ಕಾಮಗಾರಿ ವಿಭಾಗದ ಅಧಿಕಾರಿಗಳಿಗೆ ಈ ಹಿಂದಿನ ಸಭೆಯಲ್ಲಿ ಸೂಚಿಸಲಾಗಿದ್ದು

ಅದರಂತೆ ಅನುಧಾನ ಲಭ್ಯತೆಯ ಮೇರೆಗೆ ಶೀಘ್ರ ಕ್ರಮ ವಹಿಸುವಂತೆ ಕಾಮಗಾರಿ ಇಲಾಖೆಯ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

4. ತಂಗಮಲ್ಲೈ ನಗರದ ವಿನಾಯಕ ಟಾಕೀಸ್ ಹತ್ತಿರ ಬಿ.ಡಬ್ಲ್ಯೂ.ಎಸ್.ಎಸ್.ಬಿ ನೀರಿನ ಪೈಪ್‌ಲೈನ್ ಸೋರಿಕೆ ಆಗುತ್ತಿರುವುದನ್ನು ಸರಿಪಡಿಸಲು ಈ ಹಿಂದಿನ ಸಭೆಯಲ್ಲಿ ಸೂಚಿಲಾಗಿತ್ತು. ಅದರಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ರಾಹುಲ್ ಕಿರಿಯ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಈಗಾಗಲೇ ಸ್ಥಳವನ್ನು ಪರಿಶೀಲಿಸಿ ಹೊಸದಾದ ಮ್ಯಾನ್‌ಹೋಲ್ ಅನ್ನು ಈಗಾಗಲೇ ನಿರ್ಮಿಸಿದ್ದು ಉಳಿದ ಸ್ಯಾನಿಟರಿ ಪೈಪ್‌ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

5. ಮೋದಿ ಗಾರ್ಡನ್ 3ನೇ ಅಡ್ಡ ರಸ್ತೆಯಲ್ಲಿ ಪದೆ ಪದೆ ಒಳಚರಂಡಿ ಬ್ಲಾಕ್ ಆಗುತ್ತಿದ್ದು ಈ ಬಗ್ಗೆ ಶ್ರೀ ಸುರೇಶ್ ವಾರ್ಡ್ ಕಮಿಟಿ ಸದಸ್ಯರು ದೂರು ಸಲ್ಲಿಸಲಾಗಿ, ಅದರಂತೆ ದೂರವಾಣಿ ಮುಖಂತರ ಸಂಬಂಧಪಟ್ಟ ಶ್ರೀ ಧಸ್ತಗೀರ್ ಬಾಷ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಇಲಾಖೆ ರವರನ್ನು ಸಂಪರ್ಕಿಸಿ ಕೂಡಲೇ ಬ್ಲಾಕ್ ಆಗುತ್ತಿರುವ ಒಳಚರಂಡಿಯನ್ನು ಸರಿಪಡಿಸಲು ಹೀರುವ ಯಂತ್ರದ ವಾಹನವನ್ನು ಸ್ಥಳಕ್ಕೆ ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

6. ವಾರ್ಡ್ ನಂ.47 ರ ವ್ಯಾಪ್ತಿಯ ಅಂಬೇಡ್ಕರ್ ಪಾರ್ಕ್, ಎನ್.ಪಿ ಪ್ಯಾಕ್ಟರಿ ರಸ್ತೆ, ಮೋದಿ ರಸ್ತೆ ಮತ್ತು ಅಮಾವಾಸ್ಯೆ ಲೈನ್ ಹತ್ತಿರ ಕೆಟ್ಟುಹೋಗಿರುವ ಬೀದಿ ದೀಪಗಳನ್ನು ಸರಿಪಡಿಸುವಂತೆ, ಸಾರ್ವಜನಿಕರು ದೂರು ಸಲ್ಲಿಸಲಾಗಿ, ಅದರಂತೆ ಹಿದಾಯೆತ್, ಬೀದಿ ದೀಪಗಳ ನಿರ್ವಹಣೆ ಸಂಬಂಧಪಟ್ಟವರನ್ನು ಸಭೆಗೆ ಕರೆಯಿಸಿ 02 ದಿನಗಳ ಒಳಗಾಗಿ ಮೇಲ್ಕಂಡ ಸ್ಥಳಗಳಲ್ಲಿ ಬೀದಿ ದೀಪಗಳನ್ನು ದುರಸ್ಥಿಪಡಿಸಲು ಸೂಚಿಸಲಾಯಿತು.

7. ಕಾವಲ್‌ಬೈರಸಂದ್ರ ಮುಖ್ಯ ರಸ್ತೆಯಿಂದ ಮೋದಿ ಕಾರ್ಡನ್ ವರೆಗಿರುವ ಹಾಗೂ ರಕ್ಷಣ ಇಲಾಖೆಯ ಕಾಂಪೌಂಡ್ ಬಳಿ ಇರುವ ಬೀದಿ ದೀಪಗಳು ಕೆಟ್ಟುಹೋಗಿದ್ದು ಇವುಗಳನ್ನು ದುರಸ್ಥಿ ಪಡಿಸಲು ಬೆಸ್ಕಾಂ ರವರು ಸ್ಥಳಕ್ಕೆ ಹೊದಾಗ ರಕ್ಷಣ ಇಲಾಖೆಯವರು ಅನುಮತಿ ನೀಡದ ಕಾರಣ ಸದರಿ ದೀಪಗಳನ್ನು ದುರಸ್ಥಿ ಪಡಿಸಲು ಸಾದ್ಯವಾಗುತ್ತಿಲ್ಲವೆಂದು ಬೆಸ್ಕಾಂ ಇಲಾಖೆಯ ಸಿಂಬಂದಿ ತಿಳಿಸಲಾಗಿ, ಅದರಂತೆ ವಾರ್ಡ್ ಸಮಿತಿ ಸದಸ್ಯರು ರಕ್ಷಣ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಅನುಮತಿ ನೀಡುವಂತೆ ಕೋರಲು ಶ್ರೀ ಸುರೇಶ್ ವಾರ್ಡ್ ಸಮಿತಿ ಸದಸ್ಯರನ್ನು ಕೋರಲಾಗಿ ಅನುಮತಿ ಪಡೆದ ಕೂಡಲೇ ಬೀದಿ ದೀಪಗಳನ್ನು ದುರಸ್ಥಿ/ಬದಲಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಸಿಂಬಂದಿಗೆ ಸೂಚಿಲಾಯಿತು.

(ಎಸ್.ವಿಶ್ವನಾಥ)
ಅಧ್ಯಕ್ಷರು (ನೋಡಲ್ ಅಧಿಕಾರಿ)
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ: 47

**ಪ್ರತಿಯನ್ನು:**

01. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ
02. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
03. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
04. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
05. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ
06. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
07. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ, ರವರ ಅವಗಾಹನೆಗಾಗಿ ಕಳುಹಿಸಿದೆ.
08. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
09. ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.